ಮುಜರಾಯಿ ಇಲಾಖೆಯ ಧರ್ಮದರ್ಶಿಗಳ ಮಂಡಳಿ

92 (751) ಶ್ರೀ ಸುಬ್ಬಾರೆಡ್ಡಿ ಕೆ.ಎನ್. (ಗಾಂಧಿನಗರ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಜರಾಯಿ ಇಲಾಖೆಯ ದೇವಸ್ಥಾನಗಳಿಗೆ ಸ್ಥಳೀಯರನ್ನು ಧರ್ಮದರ್ಶಿಗಳನ್ನು ನೇಮಕ ಮಾಡಲು ನಿಯಮಗಳೇನು;

ಆ) ಅವಧಿ ಮುಗಿದ ಮುಜರಾಯಿ ದೇವಸ್ಥಾನಗಳ ಧರ್ಮದರ್ಶಿಗಳ ಸಮಿತಿಗಳನ್ನು ಸಕಾಲದಲ್ಲಿ ನೇಮಿಸಲು ಸರ್ಕಾರದ ಕ್ರಮವೇನು;

ಇ) ಅವಧಿ ಮುಗಿದ ತಕ್ಷಣ ಹೊಸ ಸಮಿತಿಗಳನ್ನು ನೇಮಿಸದಿರಲು ಕಾರಣಗಳೇನು;

ಈ) ಧಮದರ್ಶಿಗಳ ಸಮಿತಿಯನ್ನು ನೇಮಿಸುವ ಸಂದರ್ಭದಲ್ಲಿ ಸಂಬಂಧಪಟ್ಟ ಕ್ಷೇತ್ರದ ಶಾಸಕರನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲವೆ;

ಉ) ಸಂಬಂಧಪಟ್ಟ ಶಾಸಕರು ಸೂಚಿಸಿದವರನ್ನು ಸದಸ್ಯರನ್ನಾಗಿ ನೇಮಿಸುವುದು ಸೂಕ್ತವಲ್ಲವೆ;

ಊ) ಸಂಬಂಧಪಟ್ಟ ಶಾಸಕರನ್ನು ಧರ್ಮದರ್ಶಿ ಸಮಿತಿಗಳ ಅಧ್ಯಕ್ಷರನ್ನಾಗಿ ನೇಮಿಸಿ ಶಾಸಕರು ಸೂಚಿಸಿದವರನ್ನು ಧರ್ಮದರ್ಶಿಗಳಾಗಿ ನೇಮಿಸಲು ಸರ್ಕಾರ ಕ್ರಮ ಜರುಗಿಸುವುದೇ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು):

ಅ) ಕರ್ನಾಟಕ ಧಾರ್ಮಿಕ ಮತ್ತು ಧರ್ಮದಾಯ ಸಂಸ್ಥೆಗಳ ಕಾಯ್ದೆ 1927 ಹಾಗೂ ನಿಯಮಗಳ ಅನ್ವಯ ಧಮದರ್ಶಿಗಳು ಸಾಮಾನ್ಯವಾಗಿ ದೇವಾಲಯದ 5 ಮೈಲಿ ಸರಹದ್ದಿನಲ್ಲಿ ವಾಸಿಸುವರಾಗಿರಬೇಕು ಕನಿಷ್ಠ 2 ಮಂದಿ ಧರ್ಮದರ್ಶಿಯಾದರೂ ದೇವಸ್ಥಾನವಿರುವ ಗ್ರಾಮದ ನಿವಾಸಿಗಳಾಗಿರಬೇಕು.

ಆ) ಅವಧಿ ಮುಗಿದ ತಕ್ಷಣವೆ ನಿಯಮಾನುಸಾರ ಪ್ರಕಟಣೆ ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಿ ಸಮಿತಿ ರಚಿಸಲು ಕ್ರಮ ಕೈಗೊಳ್ಳುವಂತೆ ಅಧೀನ ಅಧಿಕಾರಿಗಳಿಗೆ ಸೂಚಿಸಿದೆ.

ಇ) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿ ಅಧಿನಿಯಮ 1997 ರಾಷ್ಟ್ರಾಧ್ಯಕ್ಷರಿಂದ ಅನುಮೋದನೆಗೊಂಡಿದ್ದು, ರಾಜ್ಯ ಸರ್ಕಾರವು ಸದರಿ ಕಾಯಿದೆಯಡಿ ನಿಯಮಗಳನ್ನು ರಚಿಸಿದ್ದು, ಶೀಘ್ರದಲ್ಲಿಯೇ ಅನುಷ್ಠಾನಗೊಳಿಸಲಾಗುವುದು. ಈಗ ರಚಿಸಿರುವ ನಿಯಮಗಳಡಿ ಸಮಿತಿಗಳ ನೇಮಕಾತಿಗಳನ್ನು ರಚಿಸುವ ಉದ್ದೇಶದಿಂದ ಹೊಸ ಸಮಿತಿಗಳ ನೇಮಕಾತಿಯಲ್ಲಿ ವಿಳಂಬವಾಗುತ್ತಿದೆ.

ಈ) ಕ್ಷೇತ್ರದ ಶಾಸಕರು ಸಲಹೆ ಮಾಡುವ ಸದಸ್ಯರನ್ನು ಸಮಿತಿಗಳಲ್ಲಿ ನೇಮಿಸಲಾಗುತ್ತಿದೆ.

ಉ) ಕ್ರಮ ಸಂಖ್ಯೆ 4 ರಲ್ಲಿ ಉತ್ತರಿಸಿದೆ.

ಊ) ಶಾಸಕರನ್ನು ಪದನಿಮಿತ್ತ ಅಧ್ಯಕ್ಷರನ್ನಾಗಿ ನೇಮಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದರೆ ನಿಯಮಾನುಸಾರ ಶಾಸಕರನ್ನು ಅಧ್ಯಕ್ಷರನ್ನಾಗಿ ಮತ್ತು ಶಾಸಕರು ಸೂಚಿಸಿದವರನ್ನು ಧರ್ಮದರ್ಶಿಗಳನ್ನಾಗಿ ನೇಮಿಸುವುದನ್ನು ಪರಿಗಣಿಸಬಹುದು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:– ಇದು ಬಹಳ ಮುಖ್ಯವಾದದ್ದು, ಅವರ ಉತ್ತರಗಳಲ್ಲಿ ಸರಿಯಾದ ವಿಷಯಗಳನ್ನು ಕೊಟ್ಟಿಲ್ಲ. ಮೊಟ್ಟಮೊದಲನೆಯದಾಗಿ ಐದು ಮೈಲಿ ಸರಹದ್ದಿನಲ್ಲಿ

ವಾಸಿಸುವವರನ್ನು ಮಾತ್ರ ಧರ್ಮದರ್ಶಿಗಳಾಗಿ ಮಾಡಬೇಕೆಂದು ಹೇಳಿದ್ದಾರೆ. ಮತ್ತು ಎರಡು ಮಂದಿ ಧರ್ಮದರ್ಶಿಗಳು ದೇವಸ್ಥಾನದ ಪಕ್ಕದಲ್ಲಿರಬೇಕೆಂದು ಹೇಳಿದ್ದಾರೆ. ಇದನ್ನು ಒಂದನ್ನೂ ಕೂಡ ಮಾಡಿಲ್ಲ. ಎರಡನೆಯದು, ರೂಲ್ಸ್‌ಗೆ ವಿರೋಧವಾಗಿ ಏನು ಬೇಕೋ ಅದನ್ನೆಲ್ಲಾ ಮಾಡಿದ್ದಾರೆ. ಮೊದಲು ಬಾಬುರಾವ್ ಚಿಂಚನಸೂರು ಅವರು ಧಾರ್ಮಿಕ ಮಂತ್ರಿಗಳಾಗಿದ್ದರು, ಅವರನ್ನು ಬದಲಾವಣೆ ಮಾಡಿ ಮೇಡಮ್ಮನವರಿಗೆ ಕೊಟ್ಟರು. ಬಹುಶಃ ಕೆಲವರಿಗೆ ಧರ್ಮದರ್ಶಿಗಳಾಗಿ ಮಾಡಿದರೆ ದೇವರಿಗೆ ಕೋಪ ಬರಬಹುದು ಎಂದು, ಅವರ ಪಾರ್ಟಿಯವರನ್ನೇ ಧರ್ಮದರ್ಶಿಗಳಾಗಿ ಮಾಡಿದ್ದಾರೆ. ಬೇರೆಯವರು ಕೊಟ್ಟಿರತಕ್ಕ ಪಟ್ಟಿಯಲ್ಲಿ ಒಂದನ್ನು ಅವರು ಮಾಡಿಲ್ಲ. ನಾವೇನು ಕೊಟ್ಟಿದ್ದೇವೋ ಅದನ್ನೆಲ್ಲಾ ಬಿಟ್ಟು ಅವರ ಪಾರ್ಟಿಯವರು ಏನು ಹೇಳಿದ್ದಾರೋ ಅದನ್ನು ಮಾತ್ರ ಮಾಡಿದ್ದಾರೆ. ಏನಾದರೂ ದೇವರಿಗೆ ಕೋಪ ಬರುವುದಾದರೆ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಅದು ಯಾವ ಊರಿಗೆ ಸಂಬಂಧಿಸಿದ್ದು, ಯಾವ ದೇವಸ್ಥಾನದ್ದು ಎಂಬುದನ್ನು ಹೇಳಿ. ಸುಮ್ಮನೆ ಜನರಲ್ಲಾಗಿ ಕಾಂಗ್ರೆಸ್‌ನವರನ್ನು ಮಾಡುತ್ತಾರೆಂದು ಹೇಳಿದರೆ ಹೇಗೆ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಎರಡು ಪಾಯಿಂಟನ್ನು ಬಹಳ ಮುಖ್ಯವಾಗಿ ಹೇಳುತ್ತಿದ್ದೇನೆ ಮೊದಲನೆಯದು 5 ಮೈಲಿ ಆಚೆ ಇರತಕ್ಕಂಥವರು, ಎರಡನೆಯದು ದೇವಸ್ಥಾನದ ಪಕ್ಕದಲ್ಲಿರಬೇಕು. ಗವಿಗಂಗಾಧರೇಶ್ವರ ದೇವಸ್ಥಾನದ ಧರ್ಮದರ್ಶಿಗಳನ್ನು ಮಾಡುವಾಗ, ಆ ಊರಿನಲ್ಲಿ ಯಾರೂ ಇಲ್ಲ ಅಂಥವರನ್ನು ಮಾಡಿದ್ದಾರೆ. ಬಹುಶಃ ಅವರಿಗೆ ಯಾರೋ ಪಟ್ಟಿ ಕೊಟ್ಟು, ಮಾಡಿದ್ದಾರೆ. ಆಮೇಲೆ, 1997ರಲ್ಲಿ ರಾಷ್ಟ್ರಾಧ್ಯಕ್ಷರಿಂದ ಅನುಮೋದನೆ ಕೊಟ್ಟಿರತಕ್ಕ ಕಾಯಿದೆ ಬಗ್ಗೆ ಶೀಘ್ರದಲ್ಲೇ ಅನುಷ್ಠಾನಗೊಳಿಸಲಾಗುವುದು ಎಂದು ಹೇಳಿದ್ದೀರಿ ಇದು ಯಾವಾಗ ಜಾರಿಗೆ ಬರುತ್ತೆ? ಶಾಸಕರು ಸಲಹೆ ಮಾಡುವ ಸದಸ್ಯರನ್ನು ಯಾರನ್ನೂ ಮಾಡಿಲ್ಲ. ಇದನ್ನು ನಾವು ಘಂಟಾಘೋಷವಾಗಿ ಹೇಳುತ್ತಿದ್ದೇವೆ. ಅವರು ಬಹುಶಃ ಪಾರ್ಟಿ ಬೇಸಿಸ್ ಮೇಲೆಯೇ ಮಾಡಿದ್ದಾರೆ. ದೇವಸ್ಥಾನದ ಧರ್ಮದರ್ಶಿಗಳಾಗಿ ನಮ್ಮಂಥ ಬೇರೆ ಪಾರ್ಟಿಯವರು ಯಾರೂ ಬರಬಾರದೆಂದು ಅವರಿಗೆ ಇರಬೇಕೆಂದು ಕಾಣುತ್ತದೆ.

ಶ್ರೀಮತಿ ಸುಮಾ ವಸಂತ್:- ಜಿಲ್ಲಾಧಿಕಾರಿಯವರು ಯಾರನ್ನು ಶಿಫಾರಸ್ ಮಾಡಿ ಕಳುಹಿಸಿಕೊಡುತ್ತಾರೋ, ಆ ಬೇಸಿಸ್ ಮೇಲೆಯೇ ನಾವು ಸಮಿತಿಯ ಸದಸ್ಯರನ್ನಾಗಿ ಮಾಡುತ್ತೇವೆ. ರಾಷ್ಟ್ರಾಧ್ಯಕ್ಷರಿಂದ ಅನುಮೋದನೆಗೊಂಡ ಧಾರ್ಮಿಕ ಸಂಸ್ಥೆಗಳ ಅಧಿನಿಯಮವನ್ನು ನಾವು ಸದ್ಯದಲ್ಲೇ ಬಿಡುಗಡೆ ಮಾಡಿ ಮಾಡುತ್ತಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್:- 1997ರಲ್ಲಿ ಮಂಜೂರಾದದ್ದು ಇವತ್ತಿನವರೆಗೆ ಜಾರಿಗೆ ಕೊಡಲಿಲ್ಲ. ಇದನ್ನು ಜಾರಿಗೆ ಕೊಡಲಿಕ್ಕೆ 3 ವರ್ಷ, 4 ವರ್ಷ ಬೇಕೇ? ನಿಮ್ಮ ಅಧಿಕಾರಿಗಳು ಏನು ಮಾಡುತ್ತಾರೆ? ರೂಲ್ ಮಾಡುವುದಕ್ಕೆ ಎಷ್ಟು ದಿವಸ ಬೇಕು?

ಶ್ರೀಮತಿ ಸುಮಾ ವಸಂತ್:- ಎಲ್ಲವೂ ಆಗಿದೆ, ಕೆಲವು ನಿಯಮಾವಳಿಗಳನ್ನು ಪೂರ್ಣ ಮಾಡಬೇಕಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ರೂಲ್ಸ್ ಮಾಡಬೇಕಾಗಿದೆ.

ಶ್ರೀ ಎಸ್.ಎಸ್. ಪಾಟೀಲ್:- ಕಾಯಿದೆ ಸಚಿವರು ರೂಲ್ಸ್ ಮಾಡಲಿಕ್ಕೆ 3 ವರ್ಷ ಬೇಕೆಂದು ಹೇಳಿದರೆ ಸರಿಯೇ? ರೂಲ್ಸ್ ಮಾಡಲಿಕ್ಕೆ ನಿಮ್ಮ ಸರ್ಕಾರಕ್ಕೆ ಒಂದೂವರೆ ವರ್ಷ ಬೇಕೇ?

ಶ್ರೀ ಡಿ.ಬಿ. ಚಂದ್ರೇಗೌಡ:- ಮೂರು ವರ್ಷವಾಗಿರುವುದಿಲ್ಲ, ಮೊನ್ನೆ ಅಪ್ರೂವಲ್ ಆಗಿ ಬಂದಿದೆ. ಬಂದಮೇಲೆ ರೂಲ್ಸ್ ಮಾಡಬೇಕು. ಮೊದಲು ರೂಲ್ಸ್ ಮಾಡಿ, ಶಾಸನ ಮಾಡುವುದಕ್ಕಾಗುವುದಿಲ್ಲ. ಇವತ್ತು ಪ್ರಶ್ನೆ ಬಂದಿರುವುದರಿಂದ ನಾನು ತಮಗೆ ಹೇಳಿದೆ. ರೂಲ್ಸ್ ಮಾಡುವುದರಲ್ಲಿ ಸ್ವಲ್ಪ ತಡವಾಗಿದೆ, ಅದರಿಂದ ಜಾರಿಗೆ ಕೊಟ್ಟಿಲ್ಲ ರೂಲ್ಸ್ ಫ್ರೇಮ್ ಮಾಡಿ, ತಕ್ಷಣ ಜಾರಿಗೆ ಕೊಡಿಸಲಿಕ್ಕೆ ಏರ್ಪಾಟು ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್:- ಇದರಿಂದ ನಮ್ಮ ಭಾಗದಲ್ಲಿ ಭಾರಿ ತೊಂದರೆಯಾಗಿದೆ. ಆ ಕಾರಣದಿಂದ ನಾವು ಕೇಳುತ್ತಿದ್ದೇವೆ. ನಮಗೆ ಆಗುತ್ತಿರುವ ತೊಂದರೆ ನಮಗೇ ಗೊತ್ತು.

ಶ್ರೀ ಡಿ.ಬಿ. ಚಂದ್ರೇಗೌಡ:- ಅದಕ್ಕಾಗಿಯೇ ಪರಿಹಾರ ಹೇಳಿದ್ದು

ಡಿ.ವಿ. ಸದಾನಂದಗೌಡ:- ಮಾನ್ಯ ಕಾನೂನು ಮಂತ್ರಿಗಳು ಒಂದನ್ನು ಕ್ಲಾರಿಫೈ ಮಾಡಬೇಕು. ಬಹುಶಃ ಹೊಸ ಮಸೂದೆ ಬಂದಿದೆ, ಅಂಗೀಕಾರ ಆಗಿದೆ. ಅದಕ್ಕೆ ರೂಲ್ಸ್ ಫ್ರೇಮ್ ಮಾಡದೇ, ಅದನ್ನು ಕಾರ್ಯಗತಗೊಳಿಸಲಿಕ್ಕೆ ಆಗುತ್ತಾ ಇಲ್ಲ ಹಲವಾರು ದೇವಸ್ಥಾನಗಳಲ್ಲಿ, ಉದಾಹರಣೆಗೆ ಸುಬ್ರಹ್ಮಣ್ಯದಂಥ ದೇವಸ್ಥಾನ ಅದು ಅತ್ಯಂತ ಪವಿತ್ರವಾದ ದೇವಸ್ಥಾನ. ಭಾರಿ ಯಾತ್ರಾರ್ಥಿಗಳು ಬರುವಂಥ ದೇವಸ್ಥಾನ. ಇದರ ಧರ್ಮದರ್ಶಿಗಳ ಅವಧಿ ಮುಗಿದು 4-5 ತಿಂಗಳುಗಳು ಕಳೆದಿದೆ. ಹೊಸ ಕಾನೂನಿಗೆ ರೂಲ್ಸ್ ಫ್ರೇಮ್ ಆಗದೇ ಮುಂದಿನ ಧರ್ಮದರ್ಶಿಗಳನ್ನು ನೇಮಕ ಮಾಡುತ್ತೀರೋ ಇಲ್ಲವೋ? ರೂಲ್ಸ್ ಫ್ರೇಮ್ ಆದ ನಂತರವೇ ಧರ್ಮದರ್ಶಿಗಳನ್ನು ನೇಮಕ ಮಾಡುವುದೇ? ಎರಡನೆಯದಾಗಿ 5ಮೈಲಿ ಒಳಗೇ ಇದ್ದಂಥವರನ್ನು ನೇಮಕ ಮಾಡಬೇಕೆಂದು ಇರುವಂಥ ಹಿನ್ನೆಲೆಯಲ್ಲಿ ಇನ್ನು ಮುಂದೆಕ್ಕೆ ಆ ರೀತಿಯ ಧರ್ಮದರ್ಶಿಗಳನ್ನು ಮಾತ್ರ ನೇಮಕ ಮಾಡಲಾಗುವುದೇ?

ಅಧ್ಯಕ್ಷರು:- ಎರಡು ಪ್ರಶ್ನೆಗಳು ಸಾಕು, ಏಕೆಂದರೆ ಇನ್ನೂ ಬೇರೆಯವರು ಇದ್ದಾರೆ. ಇದು ನಿಮ್ಮ ಮೂಲ ಪ್ರಶ್ನೆಯೇನೂ ಅಲ್ಲ. ನಿಮ್ಮ ಪಾರ್ಟಿಯವರೇ ಇನ್ನೂ ಐದು ಜನ ಇದ್ದಾರೆ ಒಬ್ಬೊಬ್ಬರು 3-4 ಪ್ರಶ್ನೆ ಕೇಳಿದರೆ ಹೇಗೆ?

ಶ್ರೀ ಡಿ.ವಿ. ಸದಾನಂದಗೌಡ :- ರೂಲ್ಸ್ ಫ್ರೇಮ್ ಆದನಂತರವೇ ಧರ್ಮದರ್ಶಿಗಳನ್ನು ನೇಮಕ ಮಾಡುವಂಥಾದ್ದು ಒಂದು. ಎರಡನೆಯದಾಗಿ 5 ಮೈಲಿ ಸರಹದ್ದಿನಲ್ಲಿ ವಾಸಿಸುವವರಿಗೇ ನೇಮಕ ಮಾಡಬೇಕೆಂದು ಈಗಾಗಲೇ ಕಾನೂನಿನಲ್ಲಿದೆ ಎಂದು ತಾವು ಒಪ್ಪಿಕೊಂಡಿದ್ದೀರಿ. ಅದೇ ರೀತಿ ಮಾಡುತ್ತೀರಾ ಎನ್ನುವುದನ್ನು ಹೇಳಬೇಕು.

(ಗೊಂದಲ)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:- ಮೈಸೂರಿನ ಚಾಮುಂಡಿ ಬೆಟ್ಟದ ಬಗ್ಗೆ ಮಾತನಾಡಬೇಕು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ನಾನು ಮೂರು ಪ್ರಶ್ನೆ ಕೇಳಿದ್ದೇನೆ, ಅದಕ್ಕೆ ಅವರು ಉತ್ತರ ಕೊಡಲಿ. ಅವರು ಪಾರ್ಟಿ ಬೇಸಿಸ್ ಮೇಲೆ ಮಾಡುತ್ತಾರೆಯೇ ಎಂಬುದು ಬಹಳ ಮುಖ್ಯ.

ಅಧ್ಯಕ್ಷರು:- ಮಂತ್ರಿಗಳಲ್ಲಿ ಒಂದು ವಿನಂತಿ. ಎಲ್ಲರೂ ಒಂದೇ ಸಲ ಕೇಳಿದರೆ ನೀವು ಉತ್ತರ ಕೊಡಿ. ಏಕೆಂದರೆ, ಎಲ್ಲರೂ ಜನರಲ್ ಪ್ರಶ್ನೆ ಕೇಳುತ್ತಿದ್ದಾರೆ. ಒಬ್ಬೊಬ್ಬರಿಗೇ ಉತ್ತರ

ಹೇಳುತ್ತಾ ಹೋದರೆ ಸಮಯ ಸಾಲುವುದಿಲ್ಲ. ಒಂದೇ ಸಲ ಎಲ್ಲರೂ ಕೇಳಿಬಿಡಲಿ, ಅನಂತರ, ನೀವು ಜನರಲ್ಲಾಗಿ ಉತ್ತರಕೊಡಿ.

ಶ್ರೀಮತಿ ಸುಮಾ ವಸಂತ್:- ಕೆಲವು ದೇವಸ್ಥಾನಗಳಿಗೆ ಹೊಸ ಆಕ್ಟ್ ಬಂದ ಮೇಲೆ ಸಮಿತಿಯನ್ನು ಮಾಡುತ್ತಿದ್ದೀರಾ ಎಂದು ಮಾನ್ಯ ಸದಾನಂದಗೌಡರು ಕೇಳಿದರು. ಕೆಲವು ದೇವಸ್ಥಾನಗಳಲ್ಲಿ ಈ ಸಂದರ್ಭದಲ್ಲಿ ಜಾತ್ರೆ ಮತ್ತು ರಥೋತ್ಸವ ಇರುವುದರಿಂದ ಈಗಾಗಲೇ ನಾವು ಸಮಿತಿಯನ್ನು ಮಾಡಿದ್ದೇವೆ. ಆದರೆ, ಹೊಸ ಆಕ್ಟ್ ಬಂದ ತಕ್ಷಣ, ಆ ಸಮಿತಿಯೆಲ್ಲವೂ ಹೋಗಿ ಮತ್ತೆ ಹೊಸದಾಗಿ ಸಮಿತಿ ಮಾಡಬೇಕಾಗುತ್ತದೆ. ಮತ್ತೆ 5 ಕಿಲೋಮೀಟರ್ ಏಕೆ ಇರಬೇಕೆಂದರೆ ಧರ್ಮದರ್ಶಿ ಮಾಡುವುದು, ಅವರು ದಿನನಿತ್ಯ ಆ ದೇವಸ್ಥಾನದಲ್ಲಿ ಹೋಗಿ ನೋಡಿಕೊಳ್ಳಬೇಕಾಗುತ್ತೆ, ಪೂಜೆ ಪುರಸ್ಕಾರಗಳಲ್ಲಿ ಭಾಗಿಯಾಗಬೇಕಾಗುತ್ತೆ. ಸುಮ್ಮನೆ ಹೆಸರಿಗೆ ಅವರು ಧರ್ಮದರ್ಶಿಗಳಾಗಿರಬಾರದು ಎಂದು ಈ ರೀತಿ ಮಾಡಿದೆ. ಕೆಲವೊಮ್ಮೆ ಅಲ್ಲಿ ಉತ್ಸವ ನಡೆಯುವ ಸಂದರ್ಭದಲ್ಲಿ ಅವರುಗಳು ಬರಲಿಕ್ಕೂ ಆಗುವುದಿಲ್ಲ. ಅದಕ್ಕೋಸ್ಕರ ಇಂತಹ ಒಂದು ನಿಯಮವನ್ನು ಪಾಲಿಸಲಾಗುತ್ತಿದೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಬಹಳ ಮುಖ್ಯವಾಗಿರುವುದು, ನಾವು ಶಿಫಾರಸ್ ಮಾಡಿರುವುದು ಯಾವುದನ್ನೂ ಸೇರಿಸಿಲ್ಲ. ಬೇರೆ ಪಾರ್ಟಿಯವರು ಬಂದರೆ, ದೇವರಿಗೆ ಏನಾದರೂ ಕೋಪ ಬರುತ್ತೆ ಎಂದು ಹೇಳುತ್ತೀರಾ?

ಅಧ್ಯಕ್ಷರು:- ದೇವರಿಗೆ ಕೋಪ ಬರುವುದು ಅವರಿಗೆ ಹೇಗೆ ಗೊತ್ತಾಗಬೇಕು?

(ಗೊಂದಲ)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:- ಮೈಸೂರಿನ ಚಾಮುಂಡಿ ಬೆಟ್ಟಕ್ಕೆ 35 ಜನ ಮಾಡಿದ್ದಾರೆ, ಅಲ್ಲಿ ಸೋರಿ ಹೋಗುತ್ತಿದೆ. ಅಂಬಲಿ ಕುಡಿಯುವವನಿಗೆ ಮೀಸೆ ಹಿಡಿಯುವರು ಇಬ್ಬರು ಎಂದು, ಈ ತರಹ ಮಾಡಿದರೆ ಆಗುತ್ತದೆಯೇ? ಇದರಲ್ಲಿ ಪಾರ್ಟಿ ಲೆಕ್ಕ ಅಲ್ಲ, ನೀವು ಪಾರ್ಟಿಯನ್ನೇ ಮುಂದಿಟ್ಟುಕೊಂಡು ಮಾಡಿದರೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಅವರು ಉತ್ತರವನ್ನು ಸರಿಯಾಗಿ ಹೇಳಿದ್ದಾರೆ. ಜಿಲ್ಲಾಧಿಕಾರಿಗಳು ಯಾರ ಯಾರ ಹೆಸರುಗಳನ್ನು ಶಿಫಾರಸ್ ಮಾಡಿ ಕಳುಹಿಸುತ್ತಾರೋ, ಆ ಪಟ್ಟಿಯಲ್ಲಿ ಆಯ್ಕೆ ಮಾಡಲಾಗುವುದೆಂದು ಹೇಳಿದ್ದಾರೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:- ಜಿಲ್ಲಾಧಿಕಾರಿಗಳು ಆಡಳಿತ ಪಕ್ಷದ ಕೈಗೊಂಬೆಗಳಾಗಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನೀವು ಪುನಃ ಪುನಃ ಅದನ್ನೇ ಕೇಳುತ್ತಿದ್ದೀರಿ. ಮಂತ್ರಿಗಳು ಅದನ್ನೇ ಹೇಳುತ್ತಿದ್ದಾರೆ. ನಿಮಗೆ ಅರ್ಥವಾಗಲಿಲ್ಲವೇನೋ ಎಂದು ನಾನು ಹೇಳಿದೆ. ಅರ್ಥವಾಗಿದ್ದರೆ ಸಾಕು, ಕುಳಿತುಕೊಳ್ಳಿ.

ಶ್ರೀ ಎ. ನಾರಾಯಣಸ್ವಾಮಿ:- ಕಾನೂನು ಸಚಿವರು ಮತ್ತು ಮುಜರಾಯಿ ಮಂತ್ರಿಗಳು ಈಗಾಗಲೇ ಒಂದು ಮಾತನ್ನು ಹೇಳಿದ್ದಾರೆ....

ಶ್ರೀಮತಿ ಸುಮಾ ವಸಂತ್:- ಕಾನೂನು ಸಚಿವರಿಗೆ ಕ್ಲಾರಿಫೈ ಮಾಡತಕ್ಕ ಅಧಿಕಾರ ಇದೆ. ರೂಲ್ಸ್ ಫ್ರೇಮ್ ಮಾಡುವಾಗ, ನಾವು ಅವರೂ ಕೂಡಿಯೇ ಮಾಡುವುದು. ಅವರು

ಹೇಳುವುದರಲ್ಲಿ ಏನೂ ತಪ್ಪಿಲ್ಲ. ಹಾಗಾಗಿ ಒಂದು ವಿಚಾರ ಹೇಳುತ್ತಿದ್ದೇನೆ. ದೇವರಿಗೆ ಆ ಪಕ್ಷ, ಈ ಪಕ್ಷ, ಎಂದು ಇಲ್ಲ. ದೇವಸ್ಥಾನಕ್ಕೆ ಬರೀ ರಾಜಕೀಯ ಪಕ್ಷದವರು ಬರುವುದಿಲ್ಲ. ನಾವು ಇದರಲ್ಲಿ ರಾಜಕೀಯ ಮಾಡುವುದಿಲ್ಲ, ನೀವು ರಾಜಕೀಯವನ್ನೇ ಮಾಡುತ್ತಿದ್ದೀರಿ. ಎಲ್ಲಾದರೂ ಇಂಥ ಒಂದೆರಡು ತಪ್ಪುಗಳು ಆಗಿದ್ದಲ್ಲಿ ಹೇಳಿ. ಎಲ್ಲಾ ಕಡೆಗಳಲ್ಲಿ ಹೀಗೆ, ಆಗಿದೆ ಎಂದು ಹೇಳುವುದು ಸರಿಯಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:– ಮಾನ್ಯ ಅಧ್ಯಕ್ಷರೆ, ಅಲ್ಲಿ ಧರ್ಮದರ್ಶಿಗಳನ್ನು ಬಿಟ್ಟು ಅವರೇ ಧ್ವಜಾರೋಹಣವನ್ನು ಮಾಡಿದ್ದಾರೆ. ಧರ್ಮದರ್ಶಿಗಳನ್ನು ಬಿಟ್ಟು ರಥೋತ್ಸವವನ್ನು ಮಾಡಿದ್ದಾರೆ. ಮಾನ್ಯ ಸಚಿವರಿಗೆ ಅದು ಗೊತ್ತಿರಲಿಕ್ಕಿಲ್ಲ.

ಅಧ್ಯಕ್ಷರು:– ಅವರುಗಳನ್ನು ನಿಮ್ಮ ಕಚೇರಿಗೆ ಕರೆಸಿಕೊಂಡು ಸಮಸ್ಯೆಯನ್ನು ಬೇಗ ಮುಗಿಸಿ...

ಶ್ರೀಮತಿ ಸುಮಾ ವಸಂತ್:– ನಿಮ್ಮ ಭಾಗದಲ್ಲಿ ಇನ್ನೂ ಸಮಿತಿಗಳನ್ನು ಮಾಡಿಲ್ಲ. ಈಗ ತಾನೇ ಫೈಲ್ ಬಂದಿದೆ, ಸಕಾಲದಲ್ಲಿ ಆ ಕುರಿತು ಕ್ರಮ ಜರುಗಿಸುತ್ತೇವೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:– ದೂರದಲ್ಲಿ ಇರುವವರನ್ನು ಕಮಿಟಿಯಲ್ಲಿ ಹಾಕಿದ್ದಾರೆ. ಕಮಿಟಿಯನ್ನು ಯಾವ ಆಧಾರದ ಮೇಲೆ ಮಾಡಿದ್ದೀರಿ? ಶಾಸಕರನ್ನು ನೆಗ್ಲೆಕ್ಟ್ ಮಾಡಿ ಯಾರ್ಯಾರನ್ನೋ ಕಮಿಟಿಯಲ್ಲಿ ಹಾಕುತ್ತೀರಿ. ಸ್ಥಳೀಯ ಶಾಸಕನಾಗಿ ನಾನು ಕೊಟ್ಟ ಲಿಸ್ಟ್‌ನಲ್ಲಿ ಯಾರನ್ನೂ ಹಾಕಿಲ್ಲ. ಈ ತರಹ ಮಾಡಲು ಕೂಡ ನಿಮಗೆ ಪಾರ್ಟಿಯವರೇ ಬೇಕೇ? ಡಿ.ಸಿ.ಯವರ ಹೆಸರು ಹೇಳುತ್ತೀರಿ. ಅವರೇನು ಮಾಡುತ್ತಾರೆ.

ಅಧ್ಯಕ್ಷರು:– ಮಾನ್ಯ ಮಂತ್ರಿಗಳು ಕೇಳಿ, ಅವರು ಗವಿಗಂಗಾಧರೇಶ್ವರ ದೇವಸ್ಥಾನದ ವಿಚಾರ ಹೇಳುತ್ತಿದ್ದಾರೆ. ಕ್ಷೇತ್ರದ ಶಾಸಕರು ಒಂದು ಲಿಸ್ಟ್‌ನ್ನು ಕೊಟ್ಟ ಮೇಲೆ ಅವರಿಗೆ ಗೌರವ ಕೊಟ್ಟು ಅದರಲ್ಲಿನ 2-3 ಹೆಸರುಗಳನ್ನಾದರೂ ಸೇರಿಸಬೇಕು.

ಶ್ರೀ ಕರಿಯಣ್ಣ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವೆಯವರು ಸರಿಯಾದ ಉತ್ತರವನ್ನು ಹೇಳಿದ್ದಾರೆ. ಡಿ.ಸಿ. ಯವರು ಕಳುಹಿಸಿದ ಪಟ್ಟಿಯನ್ನು ಮಂಜೂರು ಮಾಡಿದ್ದೇವೆ ಎಂದು ಹೇಳಿದ್ದಾರೆ. ಇವರು ಕಳುಹಿಸಿದ್ದು ಮಾಡಿಲ್ಲ ಅಂದರೆ ಅದನ್ನು ಬದಲಾವಣೆ ಮಾಡುವುದೇ? ಅದೇನು ಇವರು ಕಳುಹಿಸಿದ್ದರಲ್ಲಿ ಮಾಡಿ ಎಂದು ಹೇಳುವುದು? ಮಂತ್ರಿಗಳಿಗೆ ನೀವು ಹೀಗೆ ಹೇಳುತ್ತೀರಿ?

(ಗೊಂದಲ)

ಅಧ್ಯಕ್ಷರು:- ಶಾಸಕರು ಮೊದಲು ಜಿಲ್ಲಾಧಿಕಾರಿಗಳಿಗೂ ಕಳುಹಿಸಿ ಆ ಮೇಲೆ ಇವರಿಗೆ ತಿಳಿಸಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನದ ಕಮಿಟಿಗೆ ಇವರ ಪಕ್ಷದ 35 ಜನರು ನೇಮಕವಾಗಿದ್ದಾರೆ. ಇಷ್ಟು ಜನರು ಬೇಕೇ? ಅದೂ ಕಾಂಗ್ರೆಸ್‌ನವರೇ....

ಅಧ್ಯಕ್ಷರು:– ದೇವಸ್ಥಾನಗಳ ಕಮಿಟಿಯಲ್ಲಿ ಇನ್ನು ಮೇಲೆ ದಯವಿಟ್ಟು ಎಲ್ಲಾ ಪಕ್ಷಗಳವರನ್ನು ಕಮಿಟಿ ಸದಸ್ಯರನ್ನಾಗಿ ಹಾಕಿ. ದೇವರಿಗೆ ಎಲ್ಲಾ ಪಕ್ಷಗಳಲ್ಲಿರುವವರೂ ಭಕ್ತರಿದ್ದಾರೆ. ಇನ್ನು

ಮುಂದೆ ಜಿಲ್ಲಾಧಿಕಾರಿಯವರಿಂದ ಆ ಪಟ್ಟಿಯನ್ನು ತರಿಸಿಕೊಳ್ಳಿ. ಅದರಲ್ಲಿ ಎಲ್ಲಾ ಪಕ್ಷಗಳವರು ಇದ್ದಾರೆಯೇ ಎಂಬುದನ್ನು ನೋಡಿ, ಸರಿಪಡಿಸಿ, ದೇವರ ಹತ್ತಿರ ಯಾವ ಪಕ್ಷದವರು ಹೋಗಿ ಏನು ಮಾಡಲು ಆಗುತ್ತದೆ? ಎಲ್ಲಾ ಪಕ್ಷದವರೂ ಇರಲಿ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ:- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ. ಕಮಿಟಿಯ ನೇಮಕದಲ್ಲಿ ರಾಜಕೀಯ ಹಸ್ತಕ್ಷೇಪ ಮಾಡುತ್ತಿದ್ದಾರೆ. ಸರಿಯಾದ ವ್ಯಕ್ತಿಗಳನ್ನು ನೇಮಕ ಮಾಡಿಲ್ಲ. ದೇವರ ವಿಚಾರದಲ್ಲಿಯೂ ರಾಜಕೀಯ ಮಾಡುತ್ತಾ ಇದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್:- ಮಾನ್ಯ ಅಧ್ಯಕ್ಷರೇ, ದೇವರು ಆಲ್ ಪಾರ್ಟಿ ಆಗಬೇಕೋ ನಾನ್ ಪಾರ್ಟಿ ಆಗಬೇಕೋ?

ಶ್ರೀ ಕರಿಯಣ್ಣ:- ಯಾವುದೂ ಬೇಡ, ಬರೇ ಬಿಜೆಪಿ ಪಾರ್ಟಿ ಆಗಿರಲಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಮಾನ್ಯ ಅಧ್ಯಕ್ಷರೇ, ಇವರು ಧರ್ಮದರ್ಶಿಗಳ ನೇಮಕದಲ್ಲಿ ಹಸ್ತಕ್ಷೇಪ ಮಾಡುತ್ತಾ ಇದ್ದಾರೆ. ಸರಿಯಾದ ಧರ್ಮದಶಿ7ಗಳ ಅಪಾಯಿಂಟ್‌ಮೆಂಟ್ ಆಗುತ್ತಾ ಇಲ್ಲ. ಇದರಲ್ಲಿ ರಾಜಕೀಯ ಮಾಡುತ್ತಾ ಇದ್ದಾರೆ. ಹೀಗೆ ರಾಜಕೀಯವನ್ನು ಮಾಡುತ್ತಾ ಇದ್ದರೆ ನಾವು ಈ ಬಗ್ಗೆ ವಾಕ್‌ಔಟ್ ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರ ವೇಳೆಯಲ್ಲಿ ವಾಕ್‌ಔಟ್ ಮಾಡುವ ಸಂಪ್ರದಾಯ ಸದನದಲ್ಲಿ ಇಲ್ಲ. ಅದು ಮಾನ್ಯ ಸದಸ್ಯರ ಹಿರಿತನಕ್ಕೆ ಗೌರವವನ್ನು ತರುತ್ತದೆಯೇ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ನಾನು ಸರಕಾರದ ಕ್ರಮವನ್ನು ಪ್ರೊಟೆಸ್ಟ್ ಮಾಡಿ ವಾಕ್ ಔಟ್ ಮಾಡುತ್ತೇನೆ.

ಅಧ್ಯಕ್ಷರು:- ಯಾವ ಯಾವ ದೇವಸ್ಥಾನಗಳಲ್ಲಿ ಸಮಿತಿಗಳನ್ನು ಮಾಡಿಲ್ಲವೋ ಅವುಗಳನ್ನು ಬೇಗನೇ ಮಾಡಿ ಮುಗಿಸಿ.

ಶ್ರೀ ಆರ್. ಅಶೋಕ್:- ಬನಶಂಕರಿ ದೇವಸ್ಥಾನ ಮತ್ತು ವಸಂತವಲ್ಲಭ ದೇವಸ್ಥಾನದಲ್ಲಿ ಕಳೆದ ಎರಡು ವರ್ಷಗಳಿಂದ ಸಮಿತಿಯನ್ನು ಮಾಡಿಲ್ಲ.

ಶ್ರೀ ಎನ್. ಯೋಗೀಶ್ ಭಟ್:- ನಮ್ಮ ಕ್ಷೇತ್ರದ ಕದ್ರಿ ದೇವಸ್ಥಾನ ಮಂಗಳೂರು ಇಲ್ಲಿ ಕೂಡ ಸಮಿತಿ ಆಗಿಲ್ಲ.

ಅಧ್ಯಕ್ಷರು:- ನಾನು ಮಾನ್ಯ ಸಚಿವೆಯವರನ್ನು ನಮ್ಮ ಕಚೇರಿಗೆ ಕರೆಯಿಸಿ ಈ ವಿಚಾರದ ಕುರಿತು ಚರ್ಚಿಸುತ್ತೇನೆ.

ಗೇಣಿದಾರರಿಗೆ ಮಂಜೂರಾದ ಪ್ರಕರಣಗಳು

93 (1001) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ಪಕ್ಕಾ ನೊಡಿ ಸರ್ವೆ ಮಾಡಿ ಸರ್ವೆ ನಂಬರುಗಳನ್ನು ಗುರುತಿಸುವ ಪ್ರಕರಣಗಳು ಎಷ್ಟು ಬಾಕಿ ಇದೆ.

ಆ) ಭೂನ್ಯಾಯ ಮಂಡಳಿಯಲ್ಲಿ ಗೇಣಿದಾರರಿಗೆ ಮಂಜೂರಾದ ಪ್ರಕರಣಗಳು ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಇದೆ. (ತಾಲ್ಲೂಕುವಾರು ವಿವರ ನೀಡುವುದು)